ಇ) ಅಂತರ್ಜಲ ಮರುಪೂರಣ ಕಾಮಗಾರಿಗಳು ಮತ್ತು ಮಳೆ ನೀರು ಸುಗ್ಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಭೂ ಮೇಲ್ಮೈ ನೀರನ್ನು ಬಳಸಿಕೊಂಡು ಶಾಶ್ವತ ಕುಡಿಯುವ ನೀರು ಪೂರೈಕೆಗಾಗಿ ಜಲ ನಿರ್ಮಲ ಸ್ವಜಲಧಾರಾ, ARWSP, ಸಬ್–ಮಿಷನ್ ಹಾಗೂ MNP ಕಾರ್ಯಕ್ರಮಗಳಡಿ ಯೋಜನೆಗಳನ್ನು ರೂಪಿಸಲಾಗುತ್ತಿದೆ.

ಈ) ರಾಜ್ಯದಲ್ಲಿ ಗ್ರಾಮೀಣ ಪ್ರದೇಶಗಳ ಕುಡಿಯುವ ನೀರಿನ ವ್ಯವಸ್ಥೆಗಾಗಿ ಕೇಂದ್ರ, ರಾಜ್ಯ ವಿದೇಶೀ ನೆರವಿನ ಯೋಜನೆಗಳಡಿ ಒಟ್ಟು ರೂ. 580.00 ಕೋಟಿ ಅನುದಾನವನ್ನು 2005–06ರ ಸಾಲಿಗೆ ಒದಗಿಸಲಾಗಿದೆ.

ಉ) ಈ ಹಣವನ್ನು ಜಿಲ್ಲಾವಾರು ಪ್ರಗತಿ ಮತ್ತು ಬೇಡಿಕೆ ಆಧರಿಸಿ ಬಿಡುಗಡೆ ಮಾಡಲಾಗುವುದು.

ಊ) 2005–06ನೇ ಸಾಲಿನಲ್ಲಿ ಕುಡಿಯುವ ನೀರು ಪೂರೈಕೆ ಯೋಜನೆಗಳ ಸಲುವಾಗಿ ಮಂಡ್ಯ ಜಿಲ್ಲೆಗೆ ಕೇಂದ್ರ ವಲಯದಡಿ ರೂ. 271.79 ಲಕ್ಷ ಹಾಗೂ ರಾಜ್ಯ ವಲಯದಡಿ ರೂ. 121.00 ಲಕ್ಷಗಳನ್ನು ಜೂನ್ 2005ರ ಅಂತ್ಯಕ್ಕೆ ಬಿಡುಗಡೆ ಮಾಡಿದ್ದು ಜೂನ್ 2005ರ ಅಂತ್ಯಕ್ಕೆ ಒಟ್ಟು ರೂ. 199. 76 ಲಕ್ಷ ವೆಚ್ಚವಾಗಿದೆ.

ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿಪಡಿಸುವುದು

510 (5728) ಶ್ರೀ ಬಾಲರಾಜ್ ಎಸ್. (ಕೊಳ್ಳೇಗಾಲ):– ಮಾನ್ಯ ಗ್ರಾ.ಪಂ. ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1. ಕೊಳ್ಳೇಗಾಲ ಕ್ಷೇತ್ರದಲ್ಲಿನ ಜಿಲ್ಲಾ ಪಂಚಾಯತ್ ಮತ್ತು ಗ್ರಾಮೀಣ ರಸ್ತೆಗಳು ಅಭಿವೃದ್ಧಿಯನ್ನೇ ಕಾಣದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

2. ಒಟ್ಟು ಎಷ್ಟು ಕಿ.ಮೀ. ರಸ್ತೆಗಳು

1) ಡಾಂಬರೀಕರಣವಾಗಿದೆ 2) ಎಷ್ಟು ಜಲ್ಲಿ ರಸ್ತೆಗಳಾಗಿವೆ 3) ಇನ್ನೂ ಜಲ್ಲಿ ಡಾಂಬರೀಕರಣಕ್ಕಾಗಿ ಉಳಿದಿರುವ ರಸ್ತೆಗಳೆಷ್ಟು:

3. ಈ ರಸ್ತೆಗಳನ್ನು ಪೂರ್ಣ ಅಭಿವೃದ್ಧಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಡಾ॥ ಹೆಚ್.ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪ॥ ರಾಜ್ ಸಚಿವರು)

1. ಈ ಕ್ಷೇತ್ರದಲ್ಲೂ ಅನುದಾನ ಲಭ್ಯತೆಗೆ ಒಳಪಟ್ಟು ಗ್ರಾಮೀಣ ರಸ್ತೆಗಳನ್ನು ಅಬಿವೃದ್ಧಿಪಡಿಸಿದೆ.
2. ಕೊಳ್ಳೆಗಾಲ ಮತಕ್ಷೇತ್ರದ ರಸ್ತೆಗಳ ವಿವರ

1	ಡಾಂಬರೀಕರಣವಾಗಿರುವ ರಸ್ತೆಯ ಉದ್ದ	47.45 ಕಿ.ಮೀ.
2	ಜಲ್ಲಿ ರಸ್ತೆಯ ಉದ್ದ	119.40 ಕಿಮೀ
3	ಜಲ್ಲಿ ಡಾಂಬರೀಕರಣ ಮಾಡಬೇಕಾದ ರಸ್ತೆ ಉದ್ದ (ಮಣ್ಣಿನ ರಸ್ತೆ ಉದ್ದ)	100.80 ಕಿಮೀ.
	ಒಟ್ಟು	**267.65** ಕಿ.ಮೀ

3. ಕೇಂದ್ರ ನೆರವಿನ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ, ನಬಾರ್ಡ್ ನೆರವಿನ ಯೋಜನೆ, ರಾಜ್ಯ ಸರ್ಕಾರದ ಯೋಜನೆಯಾದ ಜಿಲ್ಲಾ ಪಂಚಾಯತ್‌ಗಳಿಗೆ ಸಹಾಯಾನುದಾನ ಮತ್ತು ಲೆಕ್ಕ ಶೀರ್ಷಿಕೆ –5054 ಗ್ರಾಮೀಣ ರಸ್ತೆ ಮತ್ತು ಸೇತುವೆ ನಿರ್ಮಾಣ, 11ನೇ ಹಣಕಾಸು ಯೋಜನೆ, ಸಂಪೂರ್ಣ ಗ್ರಾಮೀಣ ರೋಜ್ಗಾರ್ ಯೋಜನೆ ಇತ್ಯಾದಿ ಶೀರ್ಷಿಕೆಯಡಿ ಅನುದಾನ ಲಭ್ಯತೆಗೆ ಅನುಗುಣವಾಗಿ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.